ಪ್ರಸ್ತಾಪ ಮಾಡಿರುವುದರಿಂದ ನಾನು ಮತ್ತೊಮ್ಮೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿ ವಿಷಯವನ್ನು ತಿಳಿದುಕೊಳ್ಳುತ್ತೇನೆ ಹಾಗೂ ಅವ್ಯವಹಾರಗಳು ನಡೆದಿದ್ದರೆ ಅದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

ಉ) ವಿಟ್ಲ ವಿಧಾನಸಭಾಕ್ಷೇತ್ರದಲ್ಲಿ ಕೈಗಾರಿಕಾ ವಸಾಹತ್ತು

ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಾಕ್ಷರೇ, ನನ್ನ ಕ್ಷೇತ್ರದಲ್ಲಿ ತೆಂಗಿನ ತೋಟ ಇರುವಂಥ ಪ್ರದೇಶವನ್ನು ಗುರುತಿಸಿ ಅಲ್ಲಿ ಕೈಗಾರಿಕಾ ವಸಾಹತು ಮಾಡಬೇಕೆಂದು ತೀರ್ಮಾನ ಮಾಡಿ ಈಗಾಗಲೇ ಅಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಂಥ ಕ್ರಮ ಜರುಗಿಸಿದ್ದಾರೆ. ಈಗಾಗಲೇ ನಮ್ಮ ಭಾಗದಲ್ಲಿ ಎಂ. ಆರ್. ಪಿ. ಎಲ್. ಮತ್ತು ಕೊಜೆಂಟ್ರಿಕ್ಸ್ ಬಂದಿರುವುದರಿಂದ ಈ ಸಂಬಂಧವಾಗಿ ಜನರು ಭಯಭೀತರಾಗಿದ್ದಾರೆ. ಆದುದರಿಂದ, ಕೈಗಾರಿಕಾ ವಸಾಹತು ಮಾಡತಕ್ಕಂಥ ಪ್ರದೇಶದಲ್ಲಿರುವ ಜನರು ಮತ್ತು ಅಲ್ಲಿನ ಜನ ಪ್ರತಿನಿಧಿಗಳೊಡನೆ ಈ ಬಗ್ಗೆ ಚರ್ಚಿಸಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಮುಂದುವರಿಯಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಸದಸ್ಯರು ಇದರ ಬಗ್ಗೆ ಯೋಗ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಖಂಡಿತವಾಗಿ ಸರ್ಕಾರ ಕ್ರಮ ತೆಗೆದು ಕೊಳ್ಳುತ್ತದೆ.

ಊ) ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ವಿಧಿಸುವ ದಂಡ :

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಅನಧಿಕೃತ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ದಿನಾಂಕ : 4-3-1997 ರಂದು ಒಂದು ಆದೇಶ ಹೊರಡಿಸಿ ಇದೇ ತಿಂಗಳು 31ನೇ ತಾರೀಖಿನ ಒಳಗೆ ದಂಡದ ಹಣವನ್ನು ಕಟ್ಟಬೇಕೆಂದು ಗಡವು ನೀಡಿದ್ದಾರೆ. ಈ ತಿಂಗಳ 31ನೇ ತಾರೀಖಿನ ಒಳಗೆ ಹಣವನ್ನು ಕಟ್ಟುವುದಕ್ಕೆ ರೈತರುಗಳಿಗೆ ಬಹಳ ಕಷ್ಟವಾಗುವುದರಿಂದ ಇನ್ನು ಎರಡು ತಿಂಗಳಾದರೂ ಸಮಯವನ್ನು ಮುಂದುವರಿಸಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಉಪಾಧ್ಯಕ್ಷರೆ, ಅನಧಿಕೃತ ಪಂಪ್‌ಸೆಟ್ಟುಗಳ ಬಗ್ಗೆ ರೈತರುಗಳು ಕಟ್ಟಬೇಕಾದ ಕಡೆಯ ದಿನಾಂಕವನ್ನು ಇನ್ನೂ ಒಂದು ತಿಂಗಳಾದರೂ

ಮುಂದುವರಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅದರಂತೆ ಇನ್ನೊಂದು ತಿಂಗಳು ಸಮಯವನ್ನು ವಿಸ್ತರಣೆ ಮಾಡಲಾಗಿದೆ. ಅದರ ಲಾಭವನ್ನು ರೈತರುಗಳು ಪಡೆದುಕೊಳ್ಳಬೇಕು.

ಖ) ಹಾಸನದಲ್ಲಿ ಹೇಮಾವತಿ ಮಹಿಳಾ ಸಹಕಾರ ಬ್ಯಾಂಕ್ ಸ್ಥಾಪನೆ ವಿಳಂಬ.

ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೆ, ಹಾಸನದಲ್ಲಿ 'ಹೇಮಾವತಿ ಮಹಿಳಾ ಸಹಕಾರ ಬ್ಯಾಂಕ್' ಅನ್ನು ಸ್ಥಾಪನೆ ಮಾಡಬೇಕೆಂದು ಅಲ್ಲಿನ ಮಹಿಳೆಯರು ವಿನಂತಿ ಮಾಡಿಕೊಂಡ ಮೇಲೆ ಅದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್‌ನವರು ಅನುಮತಿ ನೀಡಿದರು. ಅವರು ಅನುಮತಿ ಕೊಟ್ಟ ಮೇಲೆ ಮೂಲಭೂತವಾಗಿ ಅದಕ್ಕೆ ಸಂಬಂಧಪಟ್ಟಂತೆ ಏನೇನು ಅವಶ್ಯಕತೆಗಳನ್ನು ಪೂರೈಸಬೇಕೋ, ಆ ಎಲ್ಲಾ ಅವಶ್ಯಕತೆಗಳನ್ನು ಕೂಡ ಆ ಸಂಘದವರು ಪೂರೈಸಿದ್ದಾರೆ. ಅಲ್ಲಿ ಜೀಪ್ ಪ್ರಮೋಟರ್ ಮತ್ತು ಪ್ರಮೋಟರ್‌ಗಳನ್ನು ಕೂಡ ನೇಮಕ ಮಾಡಲಾಗಿದೆ. 12 ಲಕ್ಷ ಶೇರು ಸಂಗ್ರಹಣೆ ಮಾಡಬೇಕಾದ ಕಡೆ 18 ಲಕ್ಷ ಶೇರು ಸಂಗ್ರಹಣೆ ಮಾಡಿ ಹಣ ಕಟ್ಟಿದ್ದಾರೆ. ಆದರೂ ಕೂಡ, ಆ ಸಹಕಾರ ಸಂಘದ ಬ್ಯಾಂಕ್‌ನ್ನು ಇನ್ನೂ ನೋಂದಾವಣೆ ಮಾಡುತ್ತಿಲ್ಲ. ಹಾಸನದಲ್ಲಿ ಎಲ್ಲಾ ಕೆಲಸಗಳೂ ಆಗುತ್ತವೆಂದು ಕೆಲವರಿಗೆ ಭಾವನೆ ಇದೆ. ಆದರೆ, ಅಲ್ಲಿ ಅವರಿಗೆ ಏನು ಇಷ್ಟು ಇದೆಯೋ ಅದೆಲ್ಲಾ ಆಗುತ್ತದೆ, ಅದರ ಇಷ್ಟಕ್ಕೆ ಏನು ವಿರುದ್ಧರಾಗಿರುತ್ತದೆ, ಅದು ಯಾವುದೂ ಆಗುವುದಿಲ್ಲ. ಹಾಸನದಲ್ಲಿ ಪ್ರಜಾಪ್ರಭುತ್ವ ಇಲ್ಲ. ಅಲ್ಲಿ ಇರತಕ್ಕಂಥಾದ್ದು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಬ್ಯಾಂಕ್ ಮಾಡಲು ಹಣವನ್ನು ಕಟ್ಟಿದ್ದರೂ ನೋಂದಾಣಿ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ, ಏಕೆ ಕೊಡುತ್ತಿಲ್ಲವೆಂದು ಸರ್ಕಾರ ಉತ್ತರ ಕೊಡಬೇಕು. ಮತ್ತು ಕೂಡಲೇ ನೋಂದಾಣಿ ಮಾಡಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಕಾನೂನಿನ ಪ್ರಕಾರ ಒಂದು ಸೊಸೈಟಿಯನ್ನು ರಿಜಿಸ್ಟರ್ ಮಾಡಬೇಕೆಂದರೆ ಎಷ್ಟು ಬಂಡವಾಳ ಬೇಕು ಮತ್ತು ಎಷ್ಟು ಸದಸ್ಯರು ಇರಬೇಕೆಂಬ ನಿಯಮದ ಪ್ರಕಾರ ಮಾಡಿದ ಮೇಲೂ ಕೂಡ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್ ಮತ್ತು ಇತರ ಸಂಬಧಪಟ್ಟ ಅಧಿಕಾರಿಗಳು ಇದು ಸರಿಯಾಗಿದೆ ಎಂದು ಹೇಳಿದರೂ ಕೂಡ ಆ ಸೊಸೈಟಿಯ ರಿಜಿಸ್ಟ್ರೇಷನ್ ಮಾಡಬಾರದು ಎನ್ನುವುದಕ್ಕೆ ಉದ್ದೇಶ ಏನು ಇದೆ? ಕಾನೂನಿನ ಪ್ರಕಾರ ಎಲ್ಲಾ ಸರಿ ಇದ್ದರೂ ಆ ಮಹಿಳಾ ಸಹಕಾರ ಸಂಘದ ಬ್ಯಾಂಕಿನ ರಿಜಿಸ್ಟ್ರೇಷನ್ ಅನ್ನು ತಡೆಹಿಡಿಯುವುದು ಎಷ್ಟರಮಟ್ಟಿಗೆ ಸರಿ? ಬೇರೆ ಕಡೆ